ಫ್ಯಾಕ್ಸ್ / Fax : 080-25586321
ಈಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

☎ 25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ:ಮಾನಿಮ/ಅಧ್ಯಕ್ಷರ ಕಛೇರಿ/2014/83 ಮಾರ್ಚ 25, 2014

ಸುತ್ತೋಲೆ

ವಿಷಯ: ಪರ್ಯಾಯ ಇಂಧನ ಬಳಕೆಗೆ ಉತ್ತೇಜಿಸುವ ಬಗ್ಗೆ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಳೆದ 10 ವರ್ಷಗಳಿಂದ ಮಹಾನಗರಗಳ ವಾಯು ಮಾಲಿನ್ಯ ಗುಣಮಟ್ಟವನ್ನು ನಿಯಮಿತವಾಗಿ ಮಾನಿಟರಿಂಗ್ ಮಾಡುತ್ತಿದ್ದು ಫಲಿತಾಂಶಗಳನ್ನು ಅವಲೋಕಿಸಲಾಗಿ So2, Nox ಮತ್ತು RSPM ಮಟ್ಟವು ಗಣನಿಯವಾಗಿ ಏರಿಕೆಯಾಗುತ್ತಿರುವುದು ಕಂಡುಬಂದಿದೆ. ನಗರಗಳಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯವು ತುಂಬಾ ಕಳವಳಕಾರಿ ಬೆಳವಣಿಗೆಯಾಗಿದ್ದು ಇದನ್ನು ನಿಯಂತ್ರಿಸಲು/ತಡೆಗಟ್ಟಲು ಪ್ರತಿಬಂಧಕ ಕ್ರಮಗಳನ್ನು ವಹಿಸುವುದು ಅವಶ್ಯವೆನಿಸಿರುತ್ತದೆ. ಅಲ್ಲದೆ ಪರ್ಯಾಯ ಪರಿಸರ ಸ್ನೇಹಿ ಇಂಧನಗಳ ಬಳಕೆಯನ್ನು ಉತ್ತೇಜಿಸುವುದಕ್ಕೆ ಕಾರ್ಯಕ್ರಮಗಳನ್ನು ರೂಪಿಸುವುದು ಸೂಕ್ತವಾಗಿರುತ್ತದೆ.

ಆದ್ದರಿಂದ ಕೈಗಾರಿಕೆಗಳಿಂದ ಆಗುವ ವಾಯು ಮಾಲಿನ್ಯವನ್ನು ತಡೆಗಟ್ಟುವ ದೃಷ್ಠಿಯಿಂದ ಡೀಸೆಲ್, Furnace Oil ಇತ್ಯಾದಿ ಸಾಂಪ್ರದಾಯಿಕ ಇಂಧನಗಳನ್ನು ಬಳಸುವ ಬದಲಿಗೆ ಪರ್ಯಾಯ ಪರಿಸರ ಸ್ನೇಹಿ ಇಂಧನಗಳು ಪ್ರಮುಖವಾಗಿ Biomass, Wood Pelletಗಳನ್ನು ಬಳಸುವಂತೆ ಕೈಗಾರಿಕೆಗಳನ್ನು ಉತ್ತೇಜಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದೆ. ಅಲ್ಲದೆ ಪರ್ಯಾಯ ಇಂಧನ ಬಳಕೆಯನ್ನು ಹೆಚ್ಚಿಸುವ ಯಾವುದೇ ಉತ್ತೇಜನಕಾರಿ ಪ್ರಸ್ತಾಪವಿದ್ದಲ್ಲಿ ಅದನ್ನು ಸಲ್ಲಿಸಲು ಸಹ ಸೂಚಿಸಿದೆ.

ಅಧ್ಯಕ್ಷರು

ಇವರಿಗೆ,
ಬೆಂಗಳೂರಿನ ಎಲ್ಲಾ ಪ್ರಾದೇಶಿಕ ಕಛೇರಿಗಳಿಗೆ,

ಪ್ರತಿ:

1. ಸದಸ್ಯ ಕಾರ್ಯದರ್ಶಿಯವರ ಮಾಹಿತಿಗಾಗಿ
2. ಮುಖ್ಯ ಪರಿಸರ ಅಧಿಕಾರಿ-1, 2 ಮತ್ತು 3 ಇವರ ಮಾಹಿತಿಗಾಗಿ
3. ಬೆಂಗಳೂರಿನಲ್ಲಿರುವ ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿ ಇವರ ಮಾಹಿತಿಗಾಗಿ